OS No. 6/2015 PW-**2**

**ದಿನಾಂಕ 26.08.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : 1 ರಿಂದ 4 ನೇ ಪ್ರತಿವಾದಿ ಮತ್ತು 9 ನೇ ಪ್ರತಿವಾದಿ ಪರ ಶ್ರೀ ಕೆ.ಟಿ.ಟಿ ವಕೀಲರಿಂದ :**

ನಾನು ಮತ್ತು ವಾದಿಯ ತಂದೆ ಚಿಕ್ಕತಿಮ್ಮಯ್ಯರವರು ಸಂಬಂದಿಕರಲ್ಲ. ನಮ್ಮ ಮನೆ ಮತ್ತು ವಾದಿಯವರ ಮನೆ ಬೇರೆ ಬೇರೆ ಬೀದಿಯಲ್ಲಿದೆ. ನಾನು ಚಿಕ್ಕತಿಮ್ಮಯರವರ ನೋಡಿರುತ್ತೇನೆ. ಚಿಕ್ಕತಿಮ್ಮಯ್ಯರವರಿಗೆ 3 ಜನ ಮಕ್ಕಳು. ಅವರೆಂದರೆ ವಾದಿಯವರು. ಚಿಕ್ಕತಿಮ್ಮಯ್ಯರವರ ಅಣ್ಣ ತಮ್ಮಂದಿರನ್ನು ನಾನು ನೋಡಿರುತ್ತೇನೆ. 1 ನೇ ಪ್ರತಿವಾದಿಯ ತಂದೆಯನ್ನು ನಾನು ನೋಡಿರುತ್ತೇನೆ. ಚಿಕ್ಕತಿಮ್ಮಯ್ಯ 25-26 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಚಿಕ್ಕತಿಮ್ಮಯ್ಯ ಮತ್ತು ಅವರ ಅಣ್ಣ ಸಿ ಎಂ ತಿಮ್ಮೇಗೌಡರವರು ಒಂದೇ ಕಡೆ ವಾಸ ಮಾಡುತ್ತಿದ್ದರು. ಅವರಿಗೆ 2 ಮನೆ ಇತ್ತು. ಸದರಿ ಮನೆಗಳಲ್ಲಿ ಈಗ ಒಂದು ಬಿದ್ದು ಹೋಗಿದೆ ಮತ್ತೊಂದು ಮನೆಯನ್ನು ಅದನ್ನು ವಾದಿ 2 ಮತ್ತು 3 ರವರುಗಳು ಕಟ್ಟಿರುತ್ತಾರೆ. ಸದರಿ ಮನೆ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಬಿದ್ದು ಹೋಗಿದೆ ಎಂದು ಹೇಳುವ ಮನೆ ಯಾರ ಹೆಸರಿನಲ್ಲಿದೆ ಎಂದುನನಗೆ ಗೊತ್ತಿಲ್ಲ. ಎಂ ಸಿ ತನುಜಾ ಮತ್ತು ಎಂ ಸಿ ಮಂಗಳ ಎಂದರೆ ಚಿಕ್ಕತಿಮ್ಮಯ್ಯರವರ ಮಕ್ಕಳು. ಎಂ ಸಿ ತನುಜಾ ಮತ್ತು ಎಂ ಸಿ ಮಂಗಳ ರವರ ಹೆಸರಿನಲ್ಲಿ ಖಾನೇಷುಮಾರಿ ಸಂಖ್ಯೆ 9/5/1 ರ ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ಗೋವಿಂದೇಗೌಡ ಬಿನ್ ಚಿಕ್ಕತಿಮ್ಮಯ್ಯ ಎಂದರೆ ಎಂ ಸಿ ತನುಜಾ ಮತ್ತು ಎಂ ಸಿ ಮಂಗಳ ರವರ ಅಣ್ಣ. ಗೋವಿಂದೇಗೌಡ ಬಿನ್ ಚಿಕ್ಕತಿಮ್ಮಯ್ಯ ರವರ ಹೆಸರಿನಲ್ಲಿಯೂ ಕೂಡ ಒಂದು ಖಾತಾ ಸಂಖ್ಯೆ 9/5/2 ಇದೆ ಎಂದರೆ ನನಗೆ ಗೊತ್ತಿಲ್ಲ. ಸಿ ಎಂ ತಿಮ್ಮೇಗೌಡ ಎಂದರೆ ಚಿಕ್ಕತಿಮ್ಮಯ್ಯರವರ ಅಣ್ಣ. ಅವರ ಹೆಸರಿನಲ್ಲಿಯೂ ಕೂಡ ಮತ್ತೀಕೆರೆ ಗ್ರಾಮದ ಖಾತಾ ನಂಬರ್ 11/7 ರಂತೆ ಒಂದು ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿ 2 ಮತ್ತು 3 ರವರು ಮನೆಯನ್ನು ಕಟ್ಟಿದಂತಹ ಆಸ್ತಿ ಅವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಚಿಕ್ಕತಿಮ್ಮಯ್ಯ ಮತ್ತು ತಿಮ್ಮೇಗೌಡರವರಿಗೆ ಸುಮಾರು

10 ಎಕರೆ ಜಮೀನು ಇರಬಹುದು. ಅವುಗಳ ಸರ್ವೆ ನಂಬರ್ ಗಳ ಗೊತ್ತಿಲ್ಲ. ಸದರಿ 10 ಎಕರೆ ಜಮೀನುಗಳಲ್ಲಿ ಕೆಲವು ಮಾರಾಟ ಆಗಿದೆ ಕೆಲವು ಹಾಗೇ ಇದೆ. ಚಿಕ್ಕತಿಮ್ಮಯ್ಯರವರಿಗೆ ಸೇರಿದಂತಹ ಜಮೀನಿನಲ್ಲಿ ಪುಟ್ಟತಾಯಮ್ಮ ಎನ್ನುವವರು ಸರ್ವೆ ನಂಬರ್ 1/2 ರಲ್ಲಿ ಸ್ವಾದೀನದಲ್ಲಿದ್ದಾರೆಂದರೆ ನನಗೆ ಗೊತ್ತಿಲ್ಲ. ಚಿಕ್ಕತಿಮ್ಮಯ್ಯ ಮತ್ತು ತಿಮ್ಮೇಗೌಡರವರ ಮನೆಯ ವ್ಯವಹಾರಗಳಿಗೆ ಸಂಬಂದಿಸಿದಂತೆ ನನ್ನನ್ನು ಕರೆಯುತ್ತಿರಲಿಲ್ಲ. ಚಿಕ್ಕತಿಮ್ಮಯ್ಯ ಮತ್ತು ತಿಮ್ಮೇಗೌಡರವರ ಮಕ್ಕಳುಗಳು ಯಾವ್ಯಾವಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಈಗ ಇರುವಂತಹ ಸ್ವತ್ತುಗಳು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಈ ದಾವಾವನ್ನು ಯಾವ ಯಾವ ಸರ್ವೆ ನಂಬರ್ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ಈ ದಾವಾ ಸ್ವತ್ತುಗಳು ಈ ದಾವಾ ಹಾಕುವ ಸಮಯದಲ್ಲಿ ಯಾರ ಹೆಸರಿನಲ್ಲಿದ್ದವು ಎಂದು ನಾನು ತಿಳಿದುಕೊಂಡಿಲ್ಲ.

ಮತ್ತೀಕೆರೆ ಗ್ರಾಮದಲ್ಲಿ ವಿಜಯಲಕ್ಷ್ಮೀ ಪಂಡಿತ್ ಎನ್ನುವವರು ಇದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ವಿಜಯಲಕ್ಷ್ಮೀ ಪಂಡಿತ್ ಎನ್ನುವವರು ಅಂಕಮ್ಮನವರ ಮಗಳು, ಪುಟ್ಟಯ್ಯರವರ ಧರ್ಮಪತ್ನಿ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಸದರಿ ವಿಜಯಲಕ್ಷ್ಮೀ ಪಂಡಿತ್ ರವರಿಗೆ ವಾದಿಗಳು ದಿಃ 06.11.1995 ರಂದು ಸರ್ವೆ ನಂಬರ್ 115/1 ಮತ್ತು 115/2 ರ ಸ್ವತ್ತುಗಳಳಿಗೆ ಸಂಬಂದಪಟ್ಟಂತೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸಂಕಲಗೆರೆ ಗ್ರಾಮದ ವೆಂಕಟಗಿರಿಗೌಡ ರವರ ಮಗ ಕರೀಗೌಡ ರವರು ಯಾರೆಂದು ನನಗೆ ಗೊತ್ತಿಲ್ಲ. ಸದರಿ ಕರೀಗೌಡರವರಿಗೆ ಮೃತ 1 ನೇ ವಾದಿ ದಿಃ30.03.1995 ರಲ್ಲಿ ಸರ್ವೆ ನಂಬರ್ 103/2 ರ ಸ್ವತ್ತನ್ನು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಚಿಕ್ಕತಿಮ್ಮಯ್ಯ ಮತ್ತು ತಿಮ್ಮೇಗೌಡರವರು ಬದುಕಿದ್ದಂತಹ ಕಾಲದಲ್ಲಿ ಅವರ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಇಲ್ಲ ಆ ರೀತಿ ಯಾವುದೇ ವಿಭಾಗ ಆಗಿಲ್ಲ. ತಿಮ್ಮೇಗೌಡರವರು ತೀರಿಕೊಳ್ಳುವ ಮೊದಲು ಏನೇನು ವ್ಯವಹಾರ ಮಾಡುರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಿಕ್ಕತಿಮ್ಮಯ್ಯ ಮತ್ತು ತಿಮ್ಮೇಗೌಡರವರು ನನಗೆ ಪ್ರಾಪಂಚಿಕ ಜ್ಞಾನ ಬರುವ ಮೊದಲೇ ಅಥವಾ ನಾನು ಹುಟ್ಟುವುದಕ್ಕಿಂತ ಮೊದಲೇ ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಹಾಕಿದಂತಹ ಕೆಲವು

ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಉಳಿಕೆ ಸ್ವತ್ತುಗಳು ತಿಮ್ಮೇಗೌಡರವರ ಮಕ್ಕಳಿಗೆ ಸೇರಿದಂತಹ ಆಸ್ತಿಗಳು ಎಂದರೆ ಸರಿಯಲ್ಲ. ತಿಮ್ಮೇಗೌಡರವರ 3 ಜನ ಮಕ್ಕಳು ಅವರೆಂದರೆ ವೆಂಕಟೇಶ್, ಪುಟ್ಟಸ್ವಾಮಿಗೌಡ ಮತ್ತು  ನಾರಾಯಣಗೌಡ. ದಾವಾ ಷಡ್ಯೂಲ್ ನ 4 ರಿಂದ 9 ನೇ ಸ್ವತ್ತುಗಳು ಪುಟ್ಟಸ್ವಾಮಿಗೌಡ ಮತ್ತು  ನಾರಾಯಣಗೌಡ ರವರ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಇದ್ದ ಪತ್ರ ಬರಹಗಾರರಾದ ತಿಮ್ಮೇಗೌಡರವರು ನನಗೆ ಗೊತ್ತಿದೆ. ಅವರ ಹೆಂಡತಿಯ ಹೆಸರು ಜಯಮ್ಮ. ದಾವಾ ಐಟಂ ನಂಬರ್ 10 ರ ಸ್ವತ್ತು ಅಂದರೆ ಸರ್ವೆ ನಂಬರ್ 93/1 ಜಯಮ್ಮ ರವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.  ಸರ್ವೆ ನಂಬರ್ 93/1 ಜಯಮ್ಮ ರವರ ಸ್ವಾದೀನದಲ್ಲಿದೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ವಾದಿಗಳು ಅವರ ಕುಟುಂಬದಲ್ಲಿ ಮಾಡಿದಂತಹ ವ್ಯವಹಾರದ ಬಗ್ಗೆ ಹೇಳಿಲ್ಲ. ನಾನು 1982 ರಲ್ಲಿ ಜನಿಸಿರುತ್ತೇನೆ. ನನ್ನ 11-15 ನೇ ವಯಸ್ಸಿನಲ್ಲಿ ಚಿಕ್ಕತಿಮ್ಮಯ್ಯರವರ ಮನೆಯಲ್ಲಿ ಏನೇನು ವ್ಯವಹಾರಗಳು ಆಗಿದೆ ಎಂದು ಹೇಳಲು ಸಾಧ್ಯವಿಲ್ಲ. ಚಿಕ್ಕತಿಮ್ಮಯ್ಯರವರ ಜಮೀನಿನ ಆಸು ಪಾಸು ಜಮೀನು ಇಲ್ಲ ಆದರೆ ಅದೇ ರಸ್ತೆಯಲ್ಲಿನಾನು ನಮ್ಮ ಜಮೀನಿಗೆ ಹೋಗುತ್ತೇನೆ. ವಾದಿಗಳ ಕುಟುಂಬದ ಸ್ವತ್ತುಗಳಾಗಲೀ ಅಥವಾ ಅವರ ವ್ಯವಹಾರದ ಬಗ್ಗೆ ಯಾಗಲೀ ನನಗೆ ಗೊತ್ತಿಲ್ಲ ನಾನು ಅವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 17 ನೇ ಪ್ರತಿವಾದಿಯಾದ ಮತ್ತೀಕೆರೆಯ ಎಂ.ರಾಜು ಬಿನ್ ಕರಿಯಪ್ಪ ಅಲಿಯಾಸ್ ಹೊನ್ನೇಗೌಡ ರವರು ನನಗೆ ಗೊತ್ತು. ಅವರು ದಿಃ16.10.1997 ರಲ್ಲಿ ಮೃತ 5 ನೇ ಪ್ರತಿವಾದಿಯಿಂದ ದಾವಾ ಐಟಂ ನಂಬರ್ 4 ರ ಸ್ವತ್ತನ್ನು ಖರೀದಿ ಮಾಡಿರುತ್ತಾರೆಂದರೆ ಹೌದು. ಸದರಿ ಸ್ವತ್ತಿನಲ್ಲಿ 17 ನೇ ಪ್ರತಿವಾದಿಯವರು ಸ್ವಾದೀನದಲ್ಲಿದ್ದಾರೆಂದರೆ ಹೌದು. ಸದರಿ 17 ನೇ ಪ್ರತಿವಾದಿಯವರ ಸ್ವಾದೀನವನ್ನು ವಾದಿಯವರು ಪ್ರಶ್ನೆ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು 17 ನೇ ಪ್ರತಿವಾದಿಗೆ ಆದ ಸದರಿ ಕ್ರಯ ಪತ್ರವನ್ನು ನೋಡಿಲ್ಲ. ನಾನು ಚಿಕ್ಕತಿಮ್ಮಯ್ಯ ಮತ್ತು ತಿಮ್ಮೇಗೌಡರವರ ಆಸ್ತಿಗಳ ದಾಖಲಾತಿಗಳನ್ನು ನೋಡಿಲ್ಲ. ನನಗೆ ಸಾಕ್ಷ್ಯಾ ನುಡಿಯಲು ಚಿಕ್ಕತಿಮ್ಮಯ್ಯರವರ ಮಕ್ಕಳು ಕರೆದುಕೊಂಡು ಬಂದಿರುತ್ತಾರೆ. ನನಗೆ ಯಾವ ಆಸ್ತಿಗಳಿಗೆ ಸಂಬಂದಪಟ್ಟಂತೆ ದಾವಾ ಹಾಕಿರುತ್ತೇವೆಂದು ಹೇಳಿಲ್ಲ.  2 ಮತ್ತು 3 ನೇ ವಾದಿಯವರು ಅಂದರೆ ಮಂಗಳ ಮತ್ತು ತನುಜಾರವರು ಕಟ್ಟಿಸಿರುವ

ಮನೆಯನ್ನು ಈ ದಾವಾದಲ್ಲಿ ಹೇಳಿರುತ್ತಾರೋ ಇಲ್ಲವೋ ಎಂದುನನಗೆ ಗೊತ್ತಿಲ್ಲ, ಅದೇ ರೀತಿ ಈ ಮೇಲೆ ಹೇಳಿದ 2 ಮನೆಗಳನ್ನು ಈ ದಾವಾದಲ್ಲಿ ಸೇರಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನಗೆ ಯಾರು ಯಾರುಎಷ್ಟೆಷ್ಟು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಪಿ ಡಬ್ಲ್ಯೂ 4 ರವರ ಪರಿಚಯವಿಲ್ಲ.

**<u>ಪಾಟೀ ಸವಾಲು : 17 ನೇ ಪ್ರತಿವಾದಿ ಪರ ವಕೀಲರಿಂದ :</u>**

17 ನೇ ಪ್ರತಿವಾದಿ ಪರ ವಕೀಲರು ಈ ಮೇಲೆ ನಡೆದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**<u>ಮರುವಿಚಾರಣೆ : ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ಶುಭಾ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**